ISSN: 2581-8511
Tumbe Group of International Journals
A Multidisciplinary Journal
Volume- 1
Issue-2
May-Aug: 2018

# ಭಾರತದಲ್ಲಿ ಮಕ್ಕಳು ಮತ್ತು ಯುವಕರ ಸಕ್ರಿಯ ನಾಗರೀಕತ್ವಕ್ಕಾಗಿ ಶಿಕ್ಷಣದ ಮಹತ್ವ

**ನಾಗರಾಜ.ಬಿ.ಜಿ**
ಸಹಾಯಕ ಪ್ರಾಧ್ಯಾಪಕ, ಸಮಾಜಕಾರ್ಯ ವಿಭಾಗ, ಚಿಕ್ಕನಾಯಕನಹಳ್ಳಿ
E-mail: slnnaga.bg@gmail.com

- ಪಿ.ಎಫ್‌ಗಾಗಿ ಕಾರ್ಮಿಕರ ಹೋರಾಟ, ಐದು ಬಸ್ಸುಗಳಿಗೆ ಬೆಂಕಿ, ಪೋಲಿಸರಿಗೆ ಕಲ್ಲಿನ ಹೊಡೆತ, ಕಂಗಾಲಾದ ಸಾಮಾನ್ಯ ಜನ.
- ಹಾಡಹಗಲೇ ಯುವತಿಯನ್ನು ಹೊತ್ತೊಯ್ದು ಅತ್ಯಾಚಾರಕ್ಕೆ ಯತ್ನ, ಮೂಕ ಪ್ರೇಕ್ಷಕರಾಗಿ ನೋಡುತ್ತಾ ನಿಂತಿದ್ದ ಜನ.
- 6 ವರ್ಷದ ಬಾಲಕಿಯ ಮೇಲೆ ಅತ್ಯಾಚಾರ, ಕೆಡುತ್ತಿದಿಯೇ ಸಮಾಜದ ಸ್ವಾಸ್ಥ್ಯ.
- ಇಲ್ಲಿನ ಜನಗಳಿಗೆ ದಾರಿಯೇ ಕಸದ ತೊಟ್ಟಿ, ಮನೆಯ ಕಸ ನಿತ್ಯ ದಾರಿಗೆ, ಏನೂ ಮಾಡಲಾಗದ ಅಧಿಕಾರಿಗಳು.
- ಅಪಘಾತವಾದ ಹರೀಶ್, ಪ್ರಾಣ ಕಾಪಾಡಲು ಕೋರಿದರು ಕರುಣೆ ತೋರದ ಜನ, ಪ್ರಾಣಾಪಾಯದಲ್ಲಿದ್ದ ಯುವಕನ ಜೊತೆ ಪೋಟೋ ತೆಗೆಯುವ ಮಂದಿ, ಮಾನವೀಯತೆ ಮರೆತರೆ ಜನಗಳು.
- ಜನಗಳಿಲ್ಲದೆ ನಡೆಯುವ ಗ್ರಾಮ ಸಭೆಗಳು, ಕರೆದರೂ ಭಾರದ ಜನ, ಅಧಿಕಾರಗಳ ಒತ್ತಡಕ್ಕೆ ನಡೆಯುವ ಸಭೆಗಳು.
- ಎಲ್ಲೆಂದರಲ್ಲಿ ಮಲ ಮೂತ್ರ ವಿಸರ್ಜನೆ- ಇದು ನಗರಗಳ ಜನರ ನಿತ್ಯ ಕೆಲಸ.

ಈ ಮೇಲಿನ ವ್ಯಾಖ್ಯೆಗಳನ್ನು ಒದಿದ ತಕ್ಷಣ ನಮಗೆ ನೆನಪಿಗೆ ಬರುವುದು ಯಾವುದೋ ಪತ್ರಿಕೆ, ಟಿ.ವಿ ಮತ್ತು ರೇಡಿಯೋಗಳಲ್ಲಿ ಓದಿದ, ನೋಡಿದ ಮತ್ತು ಕೇಳಿದ ಮುಖ್ಯಾಂಶಗಳು. ಇನ್ನು ಕೆಲವರಿಗೆ ಪ್ರತ್ಯಕ್ಷವಾಗಿಯೇ ಅವರ ಅನುಭವಕ್ಕೆ ಬಂದಿರುವ ಘಟನೆಗಳು.

ಇಂತಹ ಘಟನೆಗಳನ್ನು ಓದಿದಾಗ ಜನ ಏಕೆ ಈ ರೀತಿಯಾಗಿ ಅನಾಗರೀಕ ವರ್ತನೆ ಬೀರುತ್ತಾರೆ? ಇವರುಗಳನ್ನು ಸರಿ ಮಾಡುವುದು ಹೇಗೆ, ವಿದ್ಯಾವಂತರಾದರೂ ಏಕೆ ಈ ರೀತಿಯಾಗಿ ವರ್ತಿಸುತ್ತಾರೆ ಎಂಬಿವೆ ಪ್ರಶ್ನೆಗಳು ನಮ್ಮ ಸ್ಮೃತಿಪಟಲದಲ್ಲಿ ಹಾದುಹೋಗುತ್ತವೆ. ಕೆಲವೊಮ್ಮೆ ಅವು ಅಲ್ಲೆ ನಲೆಯೂರಿ ಉತ್ತರ ಸಿಗದೆ ಗೊಂದಲಕ್ಕೂ ಈಡುಮಾಡುತ್ತವೆ. ಹಾಗಾದರೆ ನಮ್ಮ ಜನ ತಮ್ಮ ನೈತಿಕತೆಯನ್ನು ಮರೆಯುತ್ತಿದ್ದಾರೆಯೇ? ನಾಗರೀಕನಾಗಿ ತಮ್ಮ ಕರ್ತವ್ಯಗಳನ್ನು ಪಾಲಿಸುವ ಸಾಮಾನ್ಯ ಜ್ಞಾನವೂ ಇಲ್ಲವೆ? ಎಂದು ಕೇಳಿದರೆ ಮೇಲಿನ ಘಟನೆಗಳನ್ನು ಕಂಡ ಯಾವುದೇ ವ್ಯಕ್ತಿ ಇಲ್ಲವೆಂದೇ ಉತ್ತರಿಸುತ್ತಾನೆ.

ಹಾಗಾದರೆ ಇಲ್ಲಿ ಏಳುವ ಮೂಲ ಪ್ರಶ್ನೆ, ಈ ನಾಗರೀಕ ಪ್ರಜ್ಞೆ ಬೆಳೆಸುವುದು ಹೇಗೆ ಎಂಬುದು. ಸಾಮಾನ್ಯರೂ ಕೂಡ ತಮ್ಮ ಹಕ್ಕುಗಳ ಬಗ್ಗೆ ಮಾತನಾಡುತ್ತಾ ನಾನು ಈ ದೇಶದ ಪ್ರಜೆ, ಇಲ್ಲಿನ ನಾಗರೀಕ ಮತ್ತು ಇಲ್ಲಿನ ನಾಗರೀಕತ್ವ ಬಳಸುವುದು ನನ್ನ ಹಕ್ಕು ಎಂದು ಹೇಳುತ್ತಾರೆ. ಈ ಹಕ್ಕಿನ ಬಗ್ಗೆ ಮಾತನಾಡುವ ಜನ ತಮ್ಮ ಕರ್ತವ್ಯಗಳನ್ನು ಮರೆತಿದ್ದಾರೆ ಎಂಬುದು.

ನಾಗರೀಕತ್ವ ಎಂದರೆ ಏನು ಎಂಬುದು ಇಲ್ಲಿನ ಮುಖ್ಯ ವಿಚಾರವಾಗುತ್ತದೆ. “ನಾಗರೀಕತ್ವ ಎನ್ನುವುದು ಹಕ್ಕುಗಳ ಗುಂಪು ಮತ್ತು ಸಮುದಾಯದ ಜನರು ಒಪ್ಪಿರುವ ನಿರ್ಬಂಧಗಳು ಮತ್ತು ಜವಾಬ್ದಾರಿಗಳು. ಈ

ಹಕ್ಕುಗಳು ಮತ್ತು ಜವಾಬ್ದಾರಿಗಳು ಕಾನೂನು ಸಬಲೀಕರಣ, ರಾಯಕೀಯದಲ್ಲಿ ಪಾಲ್ಗೊಳ್ಳುವಿಕೆ, ನಿರ್ಣಯಗಳನ್ನು ತೆಗೆದುಕೊಳ್ಳುವುದು, ಸಾಮಾಜಿಕವಾಗಿ ಸಕ್ರಿಯವಾಗಿರುವುದು ಮತ್ತು ಸಂಪನ್ಮೂಲಗಳ ಲಭ್ಯತೆ ಹೀಗೆ ಇವೇ ಮೊದಲಾದ ಅಂಶಗಳನ್ನು ಒಳಗೊಂಡಿದೆ." ಒಟ್ಟಿನಲ್ಲಿ ನಾಗರೀಕತ್ವವು 'ನಾಗರೀತ್ವದ ಹಕ್ಕುಗಳು ಮತ್ತು ನಾಗರೀಕತ್ವದ ಪಾಲ್ಗೊಳ್ಳುವಿಕೆ' ಎಂಬ ಎರಡು ಪೂರಕ ಅಂಶಗಳನ್ನು ಒಳಗೊಂಡಿದೆ.*

ನಾಗರೀಕತ್ವದ ಹಕ್ಕುಗಳು; ಸಮಾನತೆ, ಸ್ವಾತಂತ್ರ್ಯ, ಅಭಿವ್ಯಕ್ತಿ, ಗೌರವಾನ್ವಿತ ಜೀವನ, ನಾಗರೀಕ, ಸಾಮಾಜಿಕ, ರಾಯಕೀಯ ಮತ್ತು ಆರ್ಥಿಕ ಹಕ್ಕುಗಳನ್ನು ಒಳಗೊಂಡಿದ್ದು, ಇವು ಜನರ ಸ್ವಾತಂತ್ರ್ಯ ಮತ್ತು ಸಮಾನತೆಯ ಅಧಿಕಾರವನ್ನು ಒಳಗೊಂಡಿದೆ. ಇವನ್ನು ಸಂವಿಧಾನದ ಮೂರನೇ ಅಧ್ಯಾಯ-3ರಲ್ಲಿ 12-35ರವರೆಗೆ (ಮೂಲಭೂತ ಹಕ್ಕುಗಳು) ಮಾನ್ಯ ಮಾಡಿದೆ.

ನಾಗರೀಕತ್ವದ ಪಾಲ್ಗೊಳ್ಳುವಿಕೆ: ನಾಗರೀಕನಾಗಿ ತಮ್ಮ ಹಕ್ಕುಗಳನ್ನು ಚಲಾಯಿಸುವಂತೆ ಶಕ್ತರನ್ನಾಗಿ ಮಾಡುವುದು. ಇದರಲ್ಲಿ ಸಾಮಾಜಿಕ ಹೊಣೆಗಾರಿಕೆ, ನಾಗರೀಕ ಹಕ್ಕುಗಳ ಆಂಧೋಲನ, ಪರಸ್ಪರ ಸಹಕಾರ, ನ್ಯಾಯಕ್ಕಾಗಿ ಆಗ್ರಹ, ಮತ ಚಲಾವಣೆ, ಜ್ಞಾನವನ್ನು ಪಡೆಯುವುದು, ತೆರಿಗೆಯನ್ನು ನೀಡುವುದು, ಸೇವೆಗಳ ಗುಣಮಟ್ಟದ ಮೇಲೆ ನಿಗಾ ವಹಿಸುವುದು, ಮಾಧ್ಯಮದ ಕ್ರಿಯಾತ್ಮಕ ಬಳಕೆ, ಕಾನೂನನ್ನು ಗೌರವಿಸುವುದು ಮತ್ತು ಪಾಲನೆ ಮಾಡುವುದು ಇವೇ ಮೊದಲಾದ ಅಂಶಗಳು ಸೇರುತ್ತವೆ. ಇವು ನಾಗರೀಕತ್ವದ ಜವಾಬ್ದಾರಿಯಿಂದ ಹಿಡಿದು ಪ್ರಜಾಪ್ರಭುತ್ವದ ಕ್ರಿಯಾತ್ಮಕತೆಯನ್ನು ಒಳಗೊಂಡಿದೆ. ಹೀಗೆ ನಾಗರೀಕತ್ವದ ಹಕ್ಕುಗಳೇ ಕ್ರಿಯಾತ್ಮಕ ನಾಗರೀಕತ್ವದ ಆಯುಧÀಗಳಾಗಿವೆ. ಇವುಗಳನ್ನೇ ಸಂವಿಧಾನದ ಪರಿಚ್ಛೇಧ 51ಎ (ಮೂಲಭೂತ ಕರ್ತವ್ಯಗಳಲ್ಲಿ) ಹೇಳುವುದು.#

ಸಂವಿಧಾನದ ಮೂಲ ಆಶಯ ಪ್ರತಿಯೊಬ್ಬ ಪ್ರಜೆಯು ನಾಗರೀಕನಾಗಿ ಉತ್ತಮ ಜೀವನವನ್ನು ನಡೆಸಬೇಕು ಎಂಬುದು. ಈ ನಿಟ್ಟಿನಲ್ಲಿ ಹಕ್ಕುಗಳನ್ನು ಪಡೆಯುವುದಲ್ಲ ಬೇರೊಬ್ಬರ ಹಕ್ಕುಗಳನ್ನು ನೀಡುವುದು ಪ್ರಮುಖ ಸಂಗತಿ. ಹಾಗಾದಾಗ ಮಾತ್ರ ಪ್ರತಿಯೊಬ್ಬರಿಗೂ ನಿಜವಾದ ಸಮಾನತೆ, ಸ್ವಾತಂತ್ಯ ಮತ್ತು ಭದ್ರತೆ ಸಿಗುತ್ತದೆ ಎಂದು.

**ಶಿಕ್ಷಣದ ಮಹತ್ವ:**

ಶಿಕ್ಷಣ ಎಂದರೆ ವಿಕಾಸದ ಒಂದು ಭಾಗ. ಮಾನವ ತನ್ನ ಮೌಢ್ಯಾಂಧಕಾರವನ್ನು ತೊಡೆದು ವಿಕಾಸದ ಬೆಳಕಿಗೆ ತರುವಂತೆ ಮಾಡಿ, ದೇಶದ ಮತ್ತು ತನ್ನ ಒಳಿತು ಮತ್ತು ಪ್ರಗತಿಗೆ ಪೂರಕವಾಗುವಂತೆ ಮಾಡುವುದು ಮತ್ತು ಯಾವುದು ಒಳ್ಳೆಯದು ಎಂಬ ನಿರ್ಧಾರವನ್ನು ತೆಗೆದುಕೊಳ್ಳುವಂತೆ ಶಕ್ತನನ್ನಾಗಿ ಮಾಡುವುದೇ ಶಿಕ್ಷಣ. ಗಾಂಧಿಯವರು ಇದನ್ನು ಮೌಲ್ಯ ಶಿಕ್ಷಣ ಎಂದರೆ, ಠಾಗೂರ್‌ರವರು ಪ್ರಾಕೃತಿಕ ಶಿಕ್ಷಣ ಎಂದಿದ್ದಾರೆ. ಹೀಗೆ ಶಿಕ್ಷಣ ಎಂಬುದು ಕೇವಲ ಒಂದೇ ರೀತಿಯಾಗಿರದೇ ವಿವಿಧ ಮಜಲುಗಳಲ್ಲಿ ಮಗುವನ್ನು ಮತ್ತು ವ್ಯಕ್ತಿಯನ್ನು ನಾಗರೀಕತ್ವದ ಕಡೆಗೆ ಒಯ್ಯುವುದಾಗಿದೆ.

ರಾಷ್ಟ್ರೀಯ ಪಠ್ಯಕ್ರಮದ ಮೂಲ ಉದ್ದೇಶ: ಶಿಕ್ಷಣದ ಮುಖಾಂತರ ಒಂದು ವಿದ್ಯಾರ್ಥಿಯನ್ನು ಸಂವಿಧಾನದ ಮೂಲಾಂಶಗಳನ್ನು ಗೌರವಿಸುವಂತೆ ಮಾಡುವುದು, ಮಗುವಿನಲ್ಲಿ ಆಸಕ್ತಿ ಮತ್ತು ಆಲೋಚನೆಗಳನ್ನು ಪ್ರೇರೇಪಿಸುವುದು, ಸಾಮಾಜಿಕ ನ್ಯಾಯ, ಸಮಾನತೆ, ನೈತಿಕ ಮೌಲ್ಯಗಳನ್ನು ಬೆಳೆಸುವ ಮೂಲಕ ವ್ಯಕ್ತಿಯನ್ನು ಸಮಾಜಮುಖಿಯಾಗಿಸುವುದು, ಪ್ರಾಯೋಗಿಕ ಜ್ಞಾನವನ್ನು ಬೆಳೆಸುವುದು ಮತ್ತು ರಸಸ್ವಾಧಗಳನ್ನು ಮಗುವಿನಲ್ಲಿ ಉತ್ತೇಜಿಸುವುದು ಮೂಲ ಆಶಯವಾಗಿದೆ. ಇವುಗಳು ಸಿಕ್ಕಾಗ ಮೇಲೆ ನಡೆದಂತಹ ಘಟನೆಗಳು ಕಡಿಮೆಯಾಗುತ್ತವೆ ಹಾಗೂ ಸ್ವಾಸ್ಥ್ಯ ಸಮಾಜದ ನಿರ್ಮಾಣವಾಗುತ್ತದೆ. ಆ ಶಕ್ತಿ ಶಿಕ್ಷಣಕ್ಕಿದೆ. ಮತ್ತೇಕೆ ಮೇಲಿನ ಘಟನೆಗಳು ಪದೇ ಪದೇ ಮರುಕಳಿಸುತ್ತಿವೆ.

ಕೇವಲ ನಾಲ್ಕು ಗೋಡೆಗಳ ಮಧ್ಯಕ್ಕೆ ಸೀಮಿತವಾಗಿರುವ ಶಿಕ್ಷಣ, ಮಕ್ಕಳನ್ನು ಅಂಕಗಳನ್ನು ತೆಗೆಯುವ ಯಂತ್ರಗಳನ್ನಾಗಿಸಿದೆ. ಶಿಕ್ಷಣ ಇಂದು ಸೇವೆಯಾಗಿ ಉಳಿದಿಲ್ಲ. ಮಾನವಸಂಪನ್ಮೂಲ ಅಭಿವೃದ್ಧಿಯ ಕಾರ್ಯಕ್ರಮವೂ ಆಗದೆ ಜ್ಞಾನದ ಉದ್ಯಮ ಆಗಿದೆ. ಹಣ ಮಾಡುವವರನ್ನು ತಯಾರು ಮಾಡುವುದೇ ಶಿಕ್ಷಣದ ಇಂದಿನ ಮುಖ್ಯ ಉದ್ದೇಶವಾಗಿದೆ. ಅಭಿವೃದ್ಧಿಪರವಾಗಿ ಮಾನವೀಕರಣರಾಗಬೇಕಾದ ಶಿಕ್ಷಣವು ವಾಣಿಜ್ಯೀಕರಣಗೊಳ್ಳುತ್ತಿದೆ. ಶೈಕ್ಷಣಿಕ ಅಸಮಾನತೆಗಳಿಂದ ಹಾಗೂ ಶಿಕ್ಷಣದ ಖಾಸಗೀಕರಣದಿಂದ ಬಡ ವಿದ್ಯಾರ್ಥಿಗಳಿಗೆ ಅವಕಾಶಗಳು ತಪ್ಪಿಹೋಗುತ್ತಿದೆ. ಇದರ ಪರಿಣಾಮವೇ ಮೇಲಿನ ಉಲ್ಲೇಖಿತ ಘಟನೆಗಳಿಗೆ ನೇರ ನಿದರ್ಶನ.

## ಬದಲಾಗಬೇಕಾದ ಶಿಕ್ಷಣದ ರೀತಿ:

ಶಿಕ್ಷಣಕ್ಕೆ ಬರೀ ಪದವಿಗಳನ್ನು ಸೃಷ್ಟಿಸುವ ಕೆಲಸವಾಗದೆ, ಮಾನವ ಸಂಪನ್ಮೂಲ ಅಭಿವೃದ್ಧಿಯ ಕಾರ್ಯಕ್ರಮವಾಗಿರುವ ಶಿಕ್ಷಣವು ವಿದ್ಯಾರ್ಥಿಗಳ ಮತ್ತು ಯುವ ಜನಾಂಗದಲ್ಲಿ ರಾಷ್ಟ್ರೀಯ ಕಾಳಜಿ ಮತ್ತು ಬದ್ಧತೆ ಬೆಳೆಸಬೇಕು. ವಿದ್ಯಾರ್ಥಿಗಳ ನೈತಿಕ, ಬೌದ್ಧಿಕ, ಶಾರೀರಿಕ, ಆರ್ಥಿಕ, ಸಾಮಾಜಿಕ ಹಾಗೂ ಸಾಂಸ್ಕøತಿಕ ವಲಯಗಳು ವಿಕಾಸವಾಗಬೇಕು. ಜೊತೆಯಲ್ಲಿ ದೇಶದ ಮುಂದಿರುವ ಸಮಸ್ಯೆಗಳು ಹಾಗೂ ಸವಾಲುಗಳನ್ನು ನಿವಾರಿಸಿ ರಾಷ್ಟ್ರದ ಅಗತ್ಯಗಳನ್ನು ಪೂರೈಸುವಂತ ಚಿಂತನೆ ಹಾಗೂ ಕಾಳಜಿ ಶಿಕ್ಷಣಕ್ಕಿರಬೇಕು. ರಾಷ್ಟ್ರದ ಅನಕ್ಷರತೆ, ಅನೀತಿ, ಭ್ರಷ್ಟಾಚಾರ, ಅಜ್ಞಾನ, ಅಸಮಾನತೆ, ಅನಾರೋಗ್ಯ, ಬಡತನ, ಹಸಿವು ಹಾಗೂ ಪರಿಸರ ಹಾನಿಯನ್ನು ಬಗೆಹರಿಸುವ ಶಕ್ತಿಯಾಗಿ ಶಿಕ್ಷಣವು ರೂಪುಗೊಳ್ಳಬೇಕು. ಜೀವ ವಿರೋಧಿ ನೀತಿ, ಹಿಂಸೆ, ಕ್ರೌರ್ಯ, ಅಧಾರ್ಮಿಕತೆ ಹಾಗೂ ಅಪ್ರಜಾಪ್ರಭುತ್ವ ಬೆಳವಣಿಗೆಯನ್ನು ಕಡಿತಗೊಳಿಸಬೇಕು. ಮಾನವೀಯ ಹಾಗೂ ರಾಷ್ಟ್ರೀಯ ಮೌಲ್ಯಗಳು, ಸಂವಿಧಾನದ ಆಶಯಗಳು ಹಾಗೂ ಮಾನವ ಹಕ್ಕುಗಳ ಬಗೆಗಿನ ಚಿಂತನೆಯು ಶಕ್ತಿಯುತವಾಗಿ ವ್ಯಕ್ತಗೊಳ್ಳಬೇಕು. ಶಾಲಾ ಕಾಲೇಜುಗಳಲ್ಲಿ ಕಲಿತಿರುವ ಮಕ್ಕಳಲ್ಲಿ ಸಾಮಾಜಿಕ ನ್ಯಾಯ ಮತ್ತು ನೈತಿಕ ಹಿನ್ನಲೆಯಲ್ಲಿ ಅಭಿವೃದ್ಧಿಯ ತುಡಿತವನ್ನು ಬೆಳೆಸಬೇಕು. ಶಿಕ್ಷಣದ ಮೂಲಕ ಮೌಲ್ಯ ಸಂಹಿತೆಯು ಹೆಚ್ಚು ಅರ್ಥ ಪಡೆಯುವಂತಾಗಬೇಕು. ಶಿಕ್ಷಣದ ತತ್ವ ಮತ್ತು ಆಚರಣೆಗಳಲ್ಲಿ ರಾಷ್ಟ್ರೀಯ ಕಾಳಜಿಗಳು ಜೀವ ತುಂಬಿಕೊಳ್ಳಬೇಕು. ಇವುಗಳ ಜೊತೆಗೆ ಜನಸಂಖ್ಯಾ ಶಿಕ್ಷಣ, ಮೌಲ್ಯ ಶಿಕ್ಷಣ, ಮಾನವ ಹಕ್ಕುಗಳ ಶಿಕ್ಷಣ, ಲಿಂಗಸಮಾನತೆಯ ಶಿಕ್ಷಣ, ಬಹು ಸಂಸ್ಕøತಿ ಮತ್ತು ಶಾಂತಿ ಶಿಕ್ಷಣ, ಪರಿಸರ ಶಿಕ್ಷಣ ಮತ್ತು ಆರೋಗ್ಯ ಶಿಕ್ಷಣದ ವಿಚಾರಗಳು ಪ್ರಾಯೋಗಿಕವಾಗಿ ಶಿಕ್ಷಣದ ಭಾಗವಾಗಬೇಕು.

"ಗಾಂಧಿಯವರು ಹೇಳಿರುವಂತೆ ಪ್ರಜ್ಞೆ ಮತ್ತು ಪುನರಚನೆಯ ಬೆಳವಣಿಗೆಗೆ ಶಿಕ್ಷಣ ಮೂಲಭೂತ ಉಪಕರಣ" ಎಂಬಂತೆ ಇವೆಲ್ಲವೂ ಮಕ್ಕಳು ಮತ್ತು ಯುವಕರಲ್ಲಿ ಜೀವನದ ಭಾಗವಾಗಿಸುವಲ್ಲಿ ಇರುವ ಏಕೈಕ ಮಾರ್ಗ ಶಿಕ್ಷಣದಿಂದ ಮಾತ್ರ ಸಾಧ್ಯ. ಒಬ್ಬ ಸಾಮಾನ್ಯ ವ್ಯಕ್ತಿಯನ್ನು ಕ್ರಿಯಾತ್ಮ ನಾಗರೀಕನನ್ನಾಗಿಸಲು ರಾಷ್ಟ್ರೀಯ ಕಾಳಜಿಯಿಂದ ಶಿಕ್ಷಣ ರೂಪುಗೊಂಡು ಆಚರಣೆಗೊಳ್ಳಬೇಕು. ಶಿಕ್ಷಣ ನೀತಿ ನಿರೂಪಕರು, ತಜ್ಞರು, ತೀರ್ಮಾನ ಕೈಗೊಳ್ಳುವರು ಹಾಗೂ ಇಡೀ ಶಿಕ್ಷಕ ಸಮುದಾಯ ಈ ದಿಕ್ಕಿನಲ್ಲಿ ಯೋಚಿಸಿ ಕಾರ್ಯೋನ್ಮುಖವಾಗಬೇಕು ಎಂಬುದು ನನ್ನ ನಿಲುವು.

## ಮಾಹಿತಿ ಸಂಗ್ರಹ:


1. ಆಧಾರ: Defining Children's Citizenship and Civil Rights-Unicef
2. ಭಾರತದ ಸಂವಿಧಾನ, ಕೆ.ಎಂ ಸುರೇಶ್
3. ಶಿಕ್ಷಣ ಮತ್ತು ರಾಷ್ಟ್ರೀಯ ಕಾಳಜಿಗಳು- ಪ್ರೊ.ಕೋಡಿರಂಗಪ್ಪ